

**ಔಷಧಗಳನ್ನು ಉತ್ಪಾದಿಸಬಲ್ಲ ಸರ್ಕಾರಿ ಸಂಸ್ಥೆಗಳು ಮುಚ್ಚುವಂತೆ ಮಾಡಿದ, ಸರ್ಕಾರಿ ಆಸ್ಪತ್ರೆಗಳಲ್ಲೂ ಮದ್ದಿಲ್ಲದಂತೆ ಮಾಡಿದ ಸರ್ಕಾರಗಳು, ಕಡಿಮೆ ದರದಲ್ಲಿ ಔಷಧಗಳನ್ನು ಒದಗಿಸುವ ಜನೌಷಧಿ ಮಳಿಗೆಗಳನ್ನು ತೆರೆದು ಜನಸೇವೆ ಮಾಡುತ್ತಿರುವುದಾಗಿ ಹೇಳಿಕೊಳ್ಳುತ್ತಿವೆ.**

ವಿವೇಚನೆಯಿಂದ ಬಳಸಿ, ಉಳಿಸಿಕೊಳ್ಳುವ ಜವಾಬ್ದಾರಿಯು ಎಲ್ಲರ ಮೇಲಿದೆ. ಪ್ರತಿಜೈವಿಕಗಳಂತಹ ಔಷಧಗಳಿಗೆ ಸೂಕ್ಷ್ಮಾಣುಗಳು ಪ್ರತಿರೋಧವನ್ನು ಬೆಳೆಸಿ ಅವು ನಾಟದೆ ವ್ಯರ್ಥವಾಗದಂತೆ ತಡೆಯಬೇಕಿದ್ದರೆ, ಇತರ ಔಷಧಗಳನ್ನು ಅನಗತ್ಯವಾಗಿ ಬಳಸುತ್ತಿರುವುದರಿಂದ ವ್ಯರ್ಥ ವೆಚ್ಚವೂ, ಅಡ್ಡ ಪರಿಣಾಮಗಳಿಂದ ಹಾನಿಯೂ ಆಗುತ್ತಿರುವುದನ್ನು ತಪ್ಪಿಸಬೇಕಿದ್ದರೆ ಔಷಧ ತಯಾರಕರು, ವೈದ್ಯರು, ಮಾರಾಟಗಾರರು, ನಿಯಂತ್ರಕರು, ಆಡಳಿತಗಳು, ರೋಗಿಗಳು ಹಾಗೂ ಜನಸಾಮಾನ್ಯರೆಲ್ಲರೂ ಈ ಕಾರ್ಯದಲ್ಲಿ ಕೈಜೋಡಿಸಬೇಕಾಗಿದೆ.

ಔಷಧಗಳ ವಿವೇಕಯುತ ಬಳಕೆ ಪ್ರೋತ್ಸಾಹಿಸಲು 'ವಿಶ್ವ ಆರೋಗ್ಯ ಸಂಸ್ಥೆ' ಸೇರಿದಂತೆ ಅನೇಕ ಸಂಘ–ಸಂಸ್ಥೆಗಳು ಶ್ರಮಿಸುತ್ತಿವೆ. ವೈದ್ಯಕೀಯ ಪಠ್ಯದಲ್ಲೂ, ವೈದ್ಯಕೀಯ ಕಾಲೇಜುಗಳು ಹಾಗೂ ನಿರಂತರ ಕಲಿಕೆಯ ಸಮಾವೇಶಗಳಲ್ಲೂ ಔಷಧಗಳ ಜಾಗರೂಕ ಬಳಕೆಯ ಬಗ್ಗೆ ಪದೇ ಪದೇ ಒತ್ತು ನೀಡಲಾಗುತ್ತದೆ. ಅಮೆರಿಕ ಸಂಸ್ಥಾನದ ಎಲ್ಲ ತಜ್ಞ ವೈದ್ಯರನ್ನು ನೋಂದಾಯಿಸುವ ವೈದ್ಯಕೀಯ ಮಂಡಳಿಯು ಔಷಧಗಳು ಹಾಗೂ ವೈದ್ಯಕೀಯ ಪರೀಕ್ಷೆಗಳನ್ನು ವಿವೇಚನೆಯಿಂದ ಆಯ್ದುಕೊಳ್ಳುವ ಬಗೆಯನ್ನು ಪ್ರಚುರಪಡಿಸಲು ಆಂದೋಲನವನ್ನೇ ಆರಂಭಿಸಿದೆ. ಅಲ್ಲಿನ 70 ವೈದ್ಯಕೀಯ ಸಂಘಟನೆಗಳು 400ಕ್ಕೂ ಹೆಚ್ಚು ಚಿಕಿತ್ಸೆಗಳು ಮತ್ತು ಪರೀಕ್ಷೆಗಳ ಬಗ್ಗೆ ಸ್ಪಷ್ಟವಾದ ಮಾರ್ಗದರ್ಶಿ ಸೂತ್ರಗಳನ್ನು ಪ್ರಕಟಿಸಿದ್ದು, 300ಕ್ಕೂ ಹೆಚ್ಚು ವಿದ್ವತ್ ಲೇಖನಗಳು ಹಾಗೂ 10 ಸಾವಿರಕ್ಕೂ ಹೆಚ್ಚು ಮಾಧ್ಯಮ ಪ್ರಕಟಣೆಗಳ ಮೂಲಕ ವೈದ್ಯರು ಹಾಗೂ ಜನಸಾಮಾನ್ಯರ ನಡುವೆ ಅವನ್ನು ಪಸರಿಸಿವೆ (ಇಲ್ಲಿದೆ: **choosingwisely.org/wpcontent/uploads/2013/02/ChoosingWiselyMasterList.pdf**) ನಮ್ಮ ದೇಶದಲ್ಲೂ 'ಜನ ಸ್ವಾಸ್ಥ್ಯ ಅಭಿಯಾನ', 'ಡ್ರಗ್ ಆಕ್ಷನ್ ನೆಟ್‌ವರ್ಕ್' ಮುಂತಾದ ಸಂಘಟನೆಗಳು ಔಷಧಗಳ ವಿವೇಕಯುತ ಬಳಕೆಯನ್ನು ಒತ್ತಾಯಿಸುವ ಹೋರಾಟಗಳನ್ನು ನಡೆಸುತ್ತಿವೆ. ವಿಶ್ವ ಆರೋಗ್ಯ ಸಂಸ್ಥೆ ಹಾಗೂ ಭಾರತವೂ ಸೇರಿದಂತೆ ಹೆಚ್ಚಿನ ದೇಶಗಳು ಅತ್ಯಗತ್ಯ ಔಷಧಗಳ ಪಟ್ಟಿಗಳನ್ನು ಪ್ರಕಟಿಸಿದ್ದು, ಅವನ್ನು ಬಳಸಿದರೆ ಹೆಚ್ಚಿನ ರೋಗಗಳಿಗೆ ಅತಿ ಹೆಚ್ಚು ಪರಿಣಾಮಕಾರಿಯಾದ, ಅತಿ ಕಡಿಮೆ ಅಡ್ಡ ಪರಿಣಾಮಗಳುಳ್ಳ, ಹಾಗೂ ಅಗ್ಗದ ಔಷಧಗಳ ಮೂಲಕ ಮೂಲಭೂತ ಆರೋಗ್ಯ ಸೇವೆಗಳನ್ನೊದಗಿಸುವುದಕ್ಕೆ ಸಾಧ್ಯವಿದೆ.

ಮನುಕುಲಕ್ಕೆ ಅತ್ಯಗತ್ಯವಾಗಿರುವ ಅತ್ಯುತ್ತಮ, ಅತಿ ನೂತನ ಔಷಧಗಳೆಲ್ಲವೂ ಉಚಿತವಾಗಿ ಜನರಿಗೆ ದೊರೆಯುವಂತಾಗಬೇಕು. ಅದಾಗಬೇಕಿದ್ದರೆ, ಔಷಧಗಳ ಸಂಶೋಧನೆ ಹಾಗೂ ಉತ್ಪಾದನೆಗಳು ಸಂಪೂರ್ಣವಾಗಿ ಸಾರ್ವಜನಿಕರಂಗದಲ್ಲೇ ಇರಬೇಕಾಗುತ್ತದೆ, ಸರ್ಕಾರಗಳು ಅದಕ್ಕೆ ಅತಿ ಹೆಚ್ಚಿನ ಪ್ರಾಶಸ್ತ್ಯ ನೀಡಿ ಹಣವೊದಗಿಸಬೇಕಾಗುತ್ತದೆ. ಇದೊಂದು ಸಾಧಿಸಲಾಗದ ಆದರ್ಶವೆಂದು ಅನಿಸಿದರೂ, ಕಾಂಕ್ರೀಟು ಸುರಿಯುವ ಅಭಿವೃದ್ಧಿಗಿಂತ ಬಹು ದೊಡ್ಡ ಆದ್ಯತೆ ಅದುವೇ ಆಗಿದೆ ಎನ್ನುವುದನ್ನು ಅಲ್ಲಗಳೆಯಲಾದೀತೇ?

ನಮ್ಮ ದೇಶದಲ್ಲಿ ತೊಂಬತ್ತರ ದಶಕದಲ್ಲಿ ಆರಂಭಗೊಂಡ ಆರ್ಥಿಕ ಉದಾರೀಕರಣದ ನೀತಿಗಳಡಿಯಲ್ಲಿ ಶಿಕ್ಷಣ ಹಾಗೂ ಆರೋಗ್ಯಸೇವೆಗಳು ಹೆಚ್ಚು ಹೆಚ್ಚು ಖಾಸಗೀಕರಣಗೊಳ್ಳತೊಡಗಿ, ಇಂದು ಸರ್ಕಾರಿ ಆಸ್ಪತ್ರೆಗಳು ಬೀಗ ಜಡಿದುಕೊಳ್ಳುವ ಮಟ್ಟಕ್ಕೆ ತಲುಪಿವೆ. ಸರ್ಕಾರಿ ಸಂಸ್ಥೆಗಳಲ್ಲಿ ಉಚಿತವಾಗಿ ಅಥವಾ ಮಿತದರದಲ್ಲಿ ವೈದ್ಯಕೀಯ ಶಿಕ್ಷಣ ಹಾಗೂ ಆರೋಗ್ಯ ಸೇವೆಗಳನ್ನು ಒದಗಿಸುವುದಕ್ಕೆ ನೆಹರೂ ಆಡಳಿತವು ಹಾಕಿಕೊಂಡಿದ್ದ ಯೋಜನೆಗಳು ಅವಸಾನವಾಗಿವೆ. ಎಲ್ಲ ಭಾರತೀಯರಿಗೆ ಎಲ್ಲ ಬಗೆಯ ಆರೋಗ್ಯ ಸೇವೆಗಳನ್ನು ಒದಗಿಸಬೇಕಾಗಿರುವ ಸರ್ಕಾರಿ ಆಸ್ಪತ್ರೆಗಳ ಬದಲಿಗೆ 'ಆಯುಷ್ಮಾನ್ ಭಾರತ', 'ಆರೋಗ್ಯ ಕರ್ನಾಟಕ' ಇತ್ಯಾದಿ ಹೆಸರುಗಳಲ್ಲಿ ಸರ್ಕಾರಿ ದುಡ್ಡನ್ನು ಖಾಸಗಿ ಆಸ್ಪತ್ರೆಗಳಿಗೆ ನೀಡಿ, ಸೀಮಿತ ಜನವರ್ಗಗಳಿಗೆ ಸೀಮಿತ ಸೇವೆಗಳನ್ನು ಖರೀದಿಸುವ ಯೋಜನೆಗಳು ರಾರಾಜಿಸುತ್ತಿವೆ.

ಆರೋಗ್ಯ ಸೇವೆಗಳ ಖಾಸಗೀಕರಣವು ಬೆಳೆದಂತೆ ದೈತ್ಯ ಕಂಪನಿಗಳು ಆಸ್ಪತ್ರೆಗಳಲ್ಲಿ ಇನ್ನಷ್ಟು ಮುತುವರ್ಜಿಯಿಂದ ಹಣ ಹೂಡುತ್ತಿವೆ, ಅನೇಕ ವಿದೇಶಿ ಕಂಪನಿಗಳು ಹಣ ಹೂಡಲು ಯತ್ನಿಸುತ್ತಿವೆ. ದೊಡ್ಡ ಔಷಧ ಕಂಪನಿಗಳು ಕೂಡ ಆಸ್ಪತ್ರೆಗಳನ್ನೂ ವೈದ್ಯಕೀಯ ಕಾಲೇಜುಗಳನ್ನೂ ತೆರೆಯತೊಡಗಿವೆ; ಔಷಧಗಳ ಪ್ರಚಾರಕ್ಕೆ ಸಾವಿರಗಟ್ಟಲೆ ಕೋಟಿ ಸುರಿಯುವುದು ಹಳೆಯದಾಯಿತು, ತಾವೇ ಕಾಲೇಜುಗಳನ್ನು ತೆರೆದು, ತಮ್ಮ ಔಷಧಗಳನ್ನು ಬರೆಯುವ ವೈದ್ಯರನ್ನು ತಯಾರಿಸಿ, ತಮ್ಮದೇ ಆಸ್ಪತ್ರೆಗಳಲ್ಲಿ ಅವರನ್ನು ಕೆಲಸಕ್ಕಿರಿಸಿಕೊಳ್ಳುವ ಹೊಸ ಯೋಜನೆಗಳು ರೂಪುಗೊಳ್ಳುತ್ತಿವೆ. ಇಂಥ ವ್ಯವಸ್ಥೆಯಲ್ಲಿ ಸರ್ಕಾರಿ ಆಸ್ಪತ್ರೆಗಳಷ್ಟೇ ಅಲ್ಲ, ಶೇ. 70ರಷ್ಟು ಆರೋಗ್ಯ ಸೇವೆಗಳನ್ನು ಮಿತದರದಲ್ಲಿ ಒದಗಿಸುತ್ತಿರುವ ಸಣ್ಣ ಆಸ್ಪತ್ರೆಗಳು ಕೂಡಾ ಬಾಗಿಲು ಹಾಕಿಕೊಳ್ಳಬೇಕಾದ ಸ್ಥಿತಿಯೊದಗಲಿದೆ.

ಉಚಿತವಾಗಿ ಔಷಧಗಳನ್ನು ಒದಗಿಸಬೇಕಾದ ಸರ್ಕಾರಿ ಚಿಕಿತ್ಸಾಲಯಗಳಲ್ಲಿ ಸೇವೆಗಳು ದುರ್ಲಭವಾಗುತ್ತಿದ್ದಂತೆ ಖಾಸಗಿ ಅಂಗಡಿಗಳಿಂದ ಔಷಧಗಳನ್ನು ಖರೀದಿಸಬೇಕಾದ ಪ್ರಮೇಯ ಎಲ್ಲರದಾಗುತ್ತಿದೆ; ಇಂದು ಭಾರತೀಯರು ತಮ್ಮ ಆರೋಗ್ಯಕ್ಕಾಗಿ ತಗಲುವ ವೆಚ್ಚದಲ್ಲಿ ಶೇ. 70ರಷ್ಟನ್ನು ತಮ್ಮ ಕಿಸೆಯಿಂದಲೇ ಭರಿಸುತ್ತಿದ್ದಾರೆ, ಅದೇ ಕಾರಣಕ್ಕೆ ಬಡತನಕ್ಕೆ ತಳ್ಳಿಸಿಕೊಳ್ಳುತ್ತಿದ್ದಾರೆ. ಔಷಧಗಳನ್ನು ಉತ್ಪಾದಿಸಬಲ್ಲ ಸರ್ಕಾರಿ ಸಂಸ್ಥೆಗಳು ಮುಚ್ಚುವಂತೆ ಮಾಡಿದ, ಸರ್ಕಾರಿ ಆಸ್ಪತ್ರೆಗಳಲ್ಲೂ ಮದ್ದಿಲ್ಲದಂತೆ ಮಾಡಿದ ಸರ್ಕಾರಗಳು, ಕಡಿಮೆ ದರದಲ್ಲಿ ಔಷಧಗಳನ್ನು ಒದಗಿಸುವ ಜನೌಷಧಿ ಮಳಿಗೆಗಳನ್ನು ತೆರೆದು ಜನಸೇವೆ ಮಾಡುತ್ತಿರುವುದಾಗಿ ಹೇಳಿಕೊಳ್ಳುತ್ತಿವೆ. ಆದರೆ ಈ ಮಳಿಗೆಗಳಲ್ಲಿ ಖಾಸಗಿ ಕಂಪನಿಗಳ ಹಕ್ಕುಸ್ವಾಮ್ಯತೆ ಕಳೆದುಹೋಗಿರುವ ಕೆಲವು ಔಷಧಗಳಷ್ಟೇ ಲಭ್ಯವಿರುವುದರಿಂದ ಜನರ ಅಗತ್ಯಗಳನ್ನು ಪೂರೈಸಲು ಅವುಗಳಿಂದಾಗದು. ದೇಶದಲ್ಲಿ ಔಷಧಗಳ ಒಟ್ಟು ವಹಿವಾಟು ವರ್ಷಕ್ಕೆ 2 ಲಕ್ಷ ಕೋಟಿ ರೂಪಾಯಿಗಳಿರುವಾಗ, 3500 ಜನೌಷಧಿ ಕೇಂದ್ರಗಳಲ್ಲಿ ಕಳೆದ ವರ್ಷ ಕೇವಲ 74 ಕೋಟಿ ರೂಪಾಯಿ ವಹಿವಾಟಾಗಿದೆ ಎಂದರೆ ಈ ಯೋಜನೆಯ ಸತ್ಯಾಸತ್ಯತೆ ಗೋಚರವಾಗುತ್ತದೆ.

